Samyukta Karnataka 04/01/18

5

# ಗ್ರಾಮೀಣ ವಿದ್ಯುತ್ ಅಪಘಾತ

ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ಮಾರ್ಗ ಹಾಯ್ದುಹೋಗುವುದು ಸಾಮಾನ್ಯ. ಈ ವಿದ್ಯುತ್ ಮಾರ್ಗವನ್ನು ನೋಡಿಕೊಳ್ಳುವುದು ಕೆಪಿಟಿಸಿಎಲ್ ಸೇರಿದಂತೆ ಹಲವು ಕಂಪನಿಗಳ ಕರ್ತವ್ಯ. ವಿದ್ಯುತ್ ಅಗತ್ಯ ಸೇವೆ ಎಂಬ ಕಾರಣಕ್ಕೆ ರೈತರು ತಮ್ಮ ಹೊಲದಲ್ಲಿ ವಿದ್ಯುತ್ ಕಂಬಗಳನ್ನು ಹಾಕಲು ಸಹಕಾರ ನೀಡುತ್ತಿದ್ದಾರೆ. ಅದರೆ ಒಮ್ಮೆ ವಿದ್ಯುತ್ ಕಂಬ ಹಾಕಿದ ಮೇಲೆ ಅ ಕಡೆ ಯಾವ ಅಧಿಕಾರಿಗಳೂ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸುತ್ತಿಲ್ಲ. ಹೈವೋಲ್ಟೇಜ್‌ನಿಂದ ಹಿಡಿದು 11 ಕೆವಿವರೆಗೆ ಎಲ್ಲ ರೀತಿಯ ವಿದ್ಯುತ್ ಮಾರ್ಗಗಳು ಇರುತ್ತವೆ. ಕಡಿಮೆ ವೋಲ್ಟೇಜ್ ಇದ್ದ ಮಾತ್ರ ವಿದ್ಯುತ್ ಶಾಕ್ ಹೊಡೆಯುವುದಿಲ್ಲ ಎಂಬ ಭ್ರಮೆ ಬೇಡ. ಕರೆಂಟ್ ಎಂದ ಮೇಲೆ ಅದು ಯಾರ ಮಾತನ್ನೂ ಕೇಳುವುದಿಲ್ಲ. ಹಳ್ಳಿಗಳಲ್ಲಿ ಗಾಳಿ ಬೆಳಕಿಗೆ ವಿದ್ಯುತ್ ಮಾರ್ಗಗಳು ಒಳಗಾಗುವುದರಿಂದ ಆಗಾಗ್ಗೆ ಅದನ್ನು ಪರಿಶೀಲಿಸುವುದು ಬಹಳ ಮುಖ್ಯ. ಒಂದು ತಂತಿಗೂ ಮತ್ತೊಂದು ತಂತಿಗೂ ಸಂಪರ್ಕ ಕಲ್ಪಿಸುವಾಗ ಬಹಳ ಎಚ್ಚರವಹಿಸಬೇಕು. ವಿದ್ಯುತ್ ತಂತಿಗಳು ಜೋತು ಬೀಳಬಾರದು. ಗಟ್ಟಿಯಾಗಿ ಅದನ್ನು ಎಳೆದು ಬಿಗಿದಿರಬೇಕು. ಅದರೂ ಬೇಸಿಗೆ ಕಾಲದಲ್ಲಿ ವಿದ್ಯುತ್ ತಂತಿಗಳು ಜೋತು ಬೀಳುವುದು. ಏನೇ ಆದರೂ ಅದು ಯಾವುದೇ ಗಿಡಮರಗಳಿಗೆ ತಗುಲಬಾರದು. ಇದು ಸುರಕ್ಷತೆಯ ದೃಷ್ಟಿಯಿಂದ ಬಹಳ ಮುಖ್ಯ. ವಿದ್ಯುತ್ ಮಾರ್ಗ ಎಳೆಯುವುದು ಪ್ರಮುಖ ಕೆಲಸವನಲ್ಲ. ಗ್ರಾಮೀಣ ಜನರನ್ನು ಅದರ ಬಗ್ಗೆ ತಿಳವಳಿಕೆ ನೀಡಬೇಕು.

ನಗರಗಳಲ್ಲಿ ವಿದ್ಯುತ್ ಕಂಬಗಳು ಎತ್ತರದಲ್ಲಿರುತ್ತವೆ. ಹಳ್ಳಿಗಳಿಗೆ ಹೋದ ಕೂಡಲೇ ಅದರ ಎತ್ತರ ಕಡಿಮೆಯಾಗಿ ಹೋಗುತ್ತದೆ. ಇದಕ್ಕೆ ಕಾರಣ ಏನು ಎಂಬುದು ಯಾರಿಗೂ ತಿಳಿಯದು. ಪ್ರತಿ ವಿದ್ಯುತ್ ಮಾರ್ಗವನ್ನು ವಿದ್ಯುತ್ ಪರಿವೀಕ್ಷಕರು ಸ್ಥಳಕ್ಕೆ ಬಂದು ಪರಿಶೀಲಿಸಿ ಅನುಮತಿ ನೀಡಬೇಕು. ಇದು ಕಡ್ಡಾಯ. ಆದರೆ ಪ್ರತಿ ಜಿಲ್ಲೆಗೆ ಒಬ್ಬರಂತೆ ಇರುವ ವಿದ್ಯುತ್ ಪರಿವೀಕ್ಷಕರು ಸ್ಥಳಕ್ಕೆ ಬಾರದೆ ಕಚೇರಿಯಲ್ಲೇ ಕುಳಿತು ಸಹಿ ಮಾಡುತ್ತಾರೆ. ಏನಾದರೂ ಅಪಘಾತ ಸಂಭವಿಸಿದರೆ ಇವರು ಕಂಪನಿಯ ಪರವಾಗಿ ವರದಿ ನೀಡುತ್ತಾರೆ. ಬಹುತೇಕ ರೈತರಿಗೆ ವಿದ್ಯುತ್ ಪರಿವೀಕ್ಷಕರು ಇರುವುದೇ ಗೊತ್ತಿಲ್ಲ. ನ್ಯಾಯಾಲಯಗಳು ವಿದ್ಯುತ್ ಪರಿವೀಕ್ಷಕರ ವರದಿಗೆ ಮಹತ್ವ ನೀಡುತ್ತವೆ. ಅಧಿಕಾರಿಗಳು ಇದನ್ನು ಬಳಸಿಕೊಂಡು ನ್ಯಾಯಾಲಯದಲ್ಲಿ ತಮ್ಮ ಪರ ತೀರ್ಪು ಬರುವಂತೆ ಒತ್ತಾಯಿಸುತ್ತಾರೆ. ಜನರಿಗೆ ತಾಂತ್ರಿಕ ಪರಿಜ್ಞಾನ ಇರುವುದಿಲ್ಲ. ಹೀಗಾಗಿ ಅವರಿಗೆ ನ್ಯಾಯಾಲಯದಲ್ಲಿ ಹೋರಾಟ ನಡೆಸುವುದು ಹೇಗೆ ಎಂಬುದು ತಿಳಿದಿರುವುದಿಲ್ಲ. ವಿದ್ಯುತ್ ಅಪಘಾತ ಸಂಭವಿಸಿದಾಗ ಎಂಜಿನಿಯರ್‌ಗಳು ತಮ್ಮ ಕೈನಿಂದ ಹಣ ನೀಡಿ ಪ್ರಕರಣವನ್ನು ಮುಚ್ಚುಹಾಕಿಸುತ್ತಾರೆ. ಪೊಲೀಸರು ದೂರು ದಾಖಲಿಸಿಕೊಂಡರೂ ಪ್ರಕರಣವನ್ನು ವಿದ್ಯುತ್ ಇಲಾಖೆಗೆ ವರ್ಗಾಯಿಸಿ ಬಿಡುತ್ತಾರೆ. ಪ್ರತಿ ವಿತರಣ ಕಂಪನಿಯಲ್ಲೂ ವಿದ್ಯುತ್ ಅಪಘಾತಗಳಿಗೆ ಪರಿಹಾರ ನೀಡಲು ಪ್ರತ್ಯೇಕ ನಿಧಿ ಇರಬೇಕು. ಆ ರೀತಿ ವ್ಯವಸ್ಥೆ ಮಾಡಬೇಕು. ಸತ್ತರೆ ಮಾತ್ರ 1 ಲಕ್ಷ ರೂ. ಪರಿಹಾರ ಇದೆ. ಅದನ್ನೂ ಸರ್ಕಾರವೇ ನೀಡುತ್ತದೆ. ಗಾಯಗೊಂಡು ಅಂಗವಿಕಲರಾದವರಿಗೆ ಪರಿಹಾರ ಪಡೆಯುವುದು ಬಹಳ ಕಷ್ಟ. ರಾಜ್ಯಾದ್ಯಂತ ನೂರಾರು ಪ್ರಕರಣಗಳು ವರದಿಯಾಗಿದ್ದರೂ ಪರಿಹಾರ ಮಾತ್ರ ಸರಿಯಾಗಿ ವಿತರಣೆ ಆಗುತ್ತಿಲ್ಲ. ಬೆಂಗಳೂರು ಸಮೀಪ ಮಾಗಡಿ ಬಳಿ ತನ್ನ ಹೊಲದಲ್ಲಿದ ರೈತ ಸಜೀವ ತಂತಿ ತುಳಿದು ಸಾವನ್ನಪ್ಪಿದ್ದಾನೆ. ಯಾವುದೇ ವಿದ್ಯುತ್ ತಂತಿ ನೆಲಕ್ಕೆ ಬಿದ್ದ ಕೂಡಲೇ ಅದು ಮುರಿದು ಕಟ್ ಆಯಿತು ಎಂದರೆ ಕೂಡಲೇ ಟ್ರಿಪ್ ಆಗಬೇಕು. ಅ ರೀತಿ ಆಗದೇ ಇರುವುದಕ್ಕೆ ಕಾರಣವೇನು ಎಂಬುದನ್ನು ವಿದ್ಯುತ್ ಪರಿವೀಕ್ಷಕರು ವಿವರಿಸಬೇಕು. ದೋಷ ಇರುವುದು ಅಲ್ಲೇ.

Samyukta Karnataka 04/1/18

# ಕರೆಂಟ್ ಶಾಕ್‌ಗೆ ತಕರಾರು ಆಹ್ವಾನ

**ಬೆಂಗಳೂರು:** ರಾಜ್ಯದ 5 ವಿದ್ಯುತ್ ವಿತರಣ ಕಂಪನಿಗಳು ಪ್ರತಿ ಯೂನಿಟ್‌ಗೆ ಸುಮಾರು 80 ಪೈಸೆಯಿಂದ 1.30 ರೂವರೆಗೆ ಹೆಚ್ಚಿಸಿಕೊಡುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದು ಸಾರ್ವಜನಿಕರು ಅಕ್ಷೇಪಣೆಗಳನ್ನು ಸಲ್ಲಿಸಲು ಒಂದು ತಿಂಗಳ ಕಾಲಾವಕಾಶ ನೀಡಲಾಗಿದೆ. ಅಯೋಗವು ಸಾರ್ವಜನಿಕ ವಿಚಾರಣೆ ನಡೆಸಿ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ಹೊಸ ದರವನ್ನು ಪ್ರಕಟಿಸಲಿದೆ.



ಇದೇ ಮೊದಲ ಬಾರಿ ಪ್ರತಿಯೊಂದು ಕಂಪನಿಯೂ ತಮ್ಮದೇ ಆದ ವಿದ್ಯುತ್ ದರ ಏರಿಕೆಗೆ ಅರ್ಜಿ ಸಲ್ಲಿಸಿವೆ. ಇದುವರೆಗೆ ರಾಜ್ಯಾದ್ಯಂತ ಒಂದೇ ದರ ಜಾರಿಯಲ್ಲಿತ್ತು. ಬೆಂಗಳೂರು ನಗರಕ್ಕೆ ಮಾತ್ರ ಹೆಚ್ಚಿನ ದರ ನಿಗದಿಪಡಿಸಲಾಗಿತ್ತು. ಈ ಬಾರಿಯ ವಿಶೇಷ ಎಂದರೆ ಎಲ್ಲಿ ಲೋಡ್‌ಶೆಡ್ಡಿಂಗ್ ಹೆಚ್ಚಾಗಿದೆಯೋ ಅಲ್ಲಿ ವಿದ್ಯುತ್ ದರ ಏರಿಕೆ ಅಧಿಕವಾಗಲಿದೆ. ಎಲ್ಲಿ ವಿದ್ಯುತ್ ಪೂರೈಕೆ 24 ಗಂಟೆ ಇದೆಯೋ ಅಲ್ಲಿ ದರ ಏರಿಕೆ ಕಡಿಮೆ ಇದೆ. ಬೆಂಗಳೂರು ಕಂಪನಿ ಪ್ರತಿ ಯೂನಿಟ್‌ಗೆ 82 ಪೈಸೆ ಏರಿಕೆಯನ್ನು ಕೇಳಿದೆ. ಮೈಸೂರಿನ ಚಾಮುಂಡೇಶ್ವರಿ ಕಂಪನಿ 1.07 ರೂ. ಮಂಗಳೂರಿನ ಕಂಪೆನಿ 1.23 ರೂ. ಕೇಳಿದೆ. ಇದೇರೀತಿ ಹುಬ್ಬಳ್ಳಿ ಮತ್ತು ಕಲಬುರ್ಗಿ ಕಂಪನಿಗಳು ದರ ಏರಿಕೆ ಅರ್ಜಿ ಸಲ್ಲಿಸಿವೆ.

Udayavani P-iii - H. 4/01/18

# ಫ್ಲೆಕ್ಸ್ ಹಾವಳಿಗೆ ತಡೆಯಿಲ್ಲ



**ಕೆ.ಆರ್.ಪುರ ವಿಧಾನಸಭೆ ಕ್ಷೇತ್ರದ ವಿಜಿನಾಪುರ ವಾರ್ಡ್ ರಾಮಮೂರ್ತಿನಗರ ಮುಖ್ಯ ರಸ್ತೆಯ ಹಳೇ ಪೊಲೀಸ್ ಠಾಣೆ ಪಕ್ಕದಲ್ಲಿ ಅಳವಡಿಸಿರುವ ಸಾಲು ಸಾಲು ಫ್ಲೆಕ್ಸ್‌ಗಳು.**

**ಕೆ.ಆರ್.ಪುರ:** ಕ್ಷೇತ್ರದಾದ್ಯಂತ ಅನಧಿಕೃತ ಫ್ಲೆಕ್ಸ್ ಬ್ಯಾನರ್‌ಗಳ ಹಾವಳಿ ಹೆಚ್ಚಾಗಿದ್ದು, ರಾಜಕಾರಣಿಗಳು ಮತ್ತುವರ ಬೆಂಬಲಿಗರು ಕಾನೂನು ಉಲ್ಲಂಘಿಸಿ ಅಳವಡಿಸಿರುವ ಅನಧಿಕೃತ ಫ್ಲೆಕ್ಸ್‌ಗಳ ತೆರವಿಗೆ ಬಿಬಿಎಂಪಿ ಮೀನಮೇಷ ಎಣಿಸುತ್ತಿದೆ.

ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಪ್ರಚಾರದ ಭರಾಟೆ ಆರಂಭಿಸಿರುವ ವಿವಿಧ ಪಕ್ಷಗಳ ರಾಜಕೀಯ ನಾಯಕರು ಮತ್ತವರ ಬೆಂಬಲಿಗರು, ಎಲ್ಲೆಂದರಲ್ಲಿ ಫ್ಲೆಕ್ಸ್ ಅಳವಡಿಸಿದ್ದಾರೆ. ಅಲ್ಲದೆ ಈ ಫ್ಲೆಕ್ಸ್, ಬ್ಯಾನರ್‌ಗಳನ್ನು ಕಟ್ಟುವ ಸಂಬಂಧ ರಾಜಕೀಯ ಮುಖಂಡರುಗಳು ಜಿದ್ದಿಗೆ ಬಿದ್ದಿದ್ದಾರೆ.

**ಅಭಿವೃದ್ಧಿಗೂ ಫ್ಲೆಕ್ಸ್:** ಹೊಸ ವರ್ಷ, ಕನಕ ಜಯಂತಿ, ಕ್ರಿಸ್ಮಸ್, ಮಕರ ಸಂಕ್ರಾತಿ ಹಬ್ಬ, ಕನ್ನಡ ರಾಜ್ಯೋತ್ಸವ, ವೈಕುಂಠ ಏಕಾದಶಿ ಸೇರಿ ವಿವಿಧ ಧಾರ್ಮಿಕ ಆಚರಣೆ, ಸಂಭ್ರಮಗಳಿಗೆ ಶುಭ ಕೋರುವ ಫ್ಲೆಕ್ಸ್‌ಗಳು ಒಂದೆಡೆಯಾದರೆ, ಅಭಿವೃದ್ಧಿ ಕಾಮಗಾರಿಗಳಿಗೆ ಸ್ವಾಗತ ಕೋರುವ ಫ್ಲೆಕ್ಸ್‌ಗಳು ಇದೇ ಮೊದಲ ಬಾರಿ ಕಾಣಿಸಿಕೊಂಡಿವೆ. ವಿದ್ಯುತ್ ಕಂಬ, ಮರಗಿಡಗಳು ಮಾತ್ರವಲ್ಲದೆ, ಟ್ರಾಫಿಕ್ ಸಿಗ್ನಲ್ ಕಂಬಗಳನ್ನೂ ಬಿಡದಂತೆ ಫ್ಲೆಕ್ಸ್, ಬ್ಯಾನರ್ ಕಟ್ಟಲಾಗಿದೆ. ಆದರೆ ಯಾರೂ ಇದನ್ನು ಪ್ರಶ್ನಿಸುತ್ತಿಲ್ಲ.

ಅನಧಿಕೃತ ಫ್ಲೆಕ್ಸ್‌ಗಳ ಹಾವಳಿ ತಡೆಯಬೇಕು ಎಂದು ಮೇಯರ್ ಸಂಪತ್‌ರಾಜ್ ಅಧಿಕಾರಿಗಳಿಗೆ ಈ ಹಿಂದೆ ಆದೇಶಿಸಿದ್ದರು. ಆದರೆ ಅಧಿಕಾರಿಗಳು ಇದನ್ನು ಸಾರಾಸಗಟಾಗಿ ಇದನ್ನು ನಿರ್ಲಕ್ಷಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ 75, ರಾಮಮೂರ್ತಿನಗರ, ದೇವಸಂದ್ರ, ಟಿನ್ ಫ್ಯಾಕ್ಟರಿ, ವಿಜಿನಾಪುರ, ಬಸವನಪುರ, ಸೇರಿದಂತೆ ಕಲ್ಕೆರೆ ಮುಖ್ಯರಸ್ತೆಯಲ್ಲಿರುವ ವಿದ್ಯುತ್ ಕಂಬ, ಮರಗಳು ಫ್ಲೆಕ್ಸ್ ಮಯವಾಗಿವೆ.

**ಗಲಾಟೆಯಾದರೂ ಕ್ರಮವಿಲ್ಲ:** ನ.22ರಂದು ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಡಯಾಲಿಸಿಸ್ ಕೇಂದ್ರದ ಶಂಕುಸ್ಥಾಪನೆ ವೇಳೆ ಬ್ಯಾನರ್ ಕಟ್ಟುವ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಜಗಳವಾಗಿ, ಪ್ರಕರಣ ಠಾಣೆ ಮೆಟ್ಟಲೇರಿತ್ತು ಆದರೂ ಫ್ಲೆಕ್ಸ್‌ಗಳು ತೆರವಾಗಿಲ್ಲ.

Page-2 Hosa Digantha Date - 04-01-18

# ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ

▶ **ದಿಗಂತ ವರದಿ: ಬೆಂಗಳೂರು,ಜ.3**

66/11ಕೆ.ಎಚ್.ಬಿ.ಆರ್, ಗೆದ್ದಲಹಳ್ಳಿ ಕೋಣದಾಸಪುರ ಸ್ಟೇಷನ್ ವಿದ್ಯುತ್ ಉಪ-ಕೇಂದ್ರಗಳಲ್ಲಿ ಜ.5 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ತುರ್ತುನಿರ್ವಹಣಾ ಕೆಲಸಗಳನ್ನು ನಿರ್ವಹಿಸುವುದರಿಂದ ಈ ಕೆಳಗಿನ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ) ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು

ಎಚ್.ಬಿ.ಆರ್. 3ನೇ ಬ್ಲಾಕ್, ಟೀಚರ್ಸ್ ಕಾಲೋನಿ, ರಾಮದೇವಗಾರ್ಡನ್ ಯಾಸಿನ್ ನಗರ, ಸುಭಾಶ್ ಲೇಔಟ್, ಆಯಿಲ್ ಮಿಲ್‌ರಸ್ತೆ, ಮಂಗಳ ಲೇಔಟ್, ಕರಿಯನ ಪಾಳ್ಯ, ಕೆ.ಎಸ್.ಎಫ್.ಸಿ ಲೇಔಟ್, ಕಚರಕನಹಳ್ಳಿ, ಅರವಿಂದನಗರ, ಲೋಕೇಶ್ ಟೆಂಟ್‌ರಸ್ತೆ, ಭಾರತಿಯಾರ್ ರಸ್ತೆ, ಕಮ್ಮನಹಳ್ಳಿ ಮುಖ್ಯರಸ್ತೆ ಭಾಗ, ಮೇಯರ್• ಶಂಕರ್ ರಸ್ತೆ, ಕಾಚರಕನ ಹಳ್ಳಿ, ಜಲವಾಯು ವಿಹಾರ, ಎಚ್.ಆರ್.ಬಿ.ಆರ್. ಲೇಔಟ್, 2ನೇ ಬ್ಲಾಕ್, 3ನೇ ಬ್ಲಾಕ್, ಬಿ.ಟಿ.ಎಸ್.ಡಿಪೋ ಹಿಂಭಾಗ, ರಾಮಯ್ಯ ಲೇಔಟ್, ಹಾರ್ಮನಿ ಅಪಾರ್ಟ್‌ಮೆಂಟ್, ನಾಗದೇವಿ ಇಂಡಸ್ಟ್ರೀಸ್, ಕರಮಚಂದ್ರ ಲೇಔಟ್, ಅಮಲ ಇಂಜಿನಿಯರಿಂಗ್, ಜಾನಕಿರಾಮ್ ಲೇಔಟ್, ಬಾಣಸವಾಡಿ ರೈಲ್ವೆ ಸ್ಟೇಷನ್ ರಸ್ತೆ, ಡಾನ್ ಬಾಸ್ಕೋ ಚರ್ಚ್, ಎಲ್.ಆರ್.ಪಿ ಹಳ್ಳಿ, ಸೇಟ್ ಪಾಳ್ಯ, ಹೆಣ್ಣೂರು ಮುಖ್ಯರಸ್ತೆ, ಗೋವಿಂದಪುರ ಮುಖ್ಯರಸ್ತೆ, ರಶದ್ ನಗರ, ಫರೀದಾ ಶೂ ಫ್ಯಾಕ್ಟರಿ, ಅರೇಬಿಕ್ ಕಾಲೇಜ್, ಕೆ.ಜಿ. ಹಳ್ಳಿ, ಗೋವಿಂದಪುರ ಹಳ್ಳಿ, 5ನೇ ಬ್ಲಾಕ್, ಎಚ್.ಬಿ.ಆರ್. ನಾಗಾವರ ಮುಖ್ಯರಸ್ತೆ, ನಾಗಾವರ, ಎನ್.ಜೆ.ಕೆ ಗಾರ್ಮೆಂಟ್ಸ್, ಬೈರನಕುಂಟೆ, ಕುಪ್ಪುಸ್ವಾಮಿ ಲೇಔಟ್, ಎಚ್.ಕೆ.ಬಿ.ಕೆ. ಕಾಲೇಜ್, 4ನೇ ಮತ್ತು 5ನೇ ಎಚ್.ಬಿ.ಆರ್. ಲೇಔಟ್, ವಿದ್ಯಾ ಸಾಗರ್, ಥಣಿಸಂದ್ರ, ಆರ್.ಕೆ. ಹೆಗ್ಡೆನಗರ, ಕೆ. ನಾರಾಯಣಪುರ, ಎನ್.ಎನ್. ಹಳ್ಳಿ, ಬಾಲಾಜಿ ಲೇಔಟ್, ಫೇಸ್ 1 ರಿಂದ 3, ರೈಲ್ವೆಮೆನ್ಸ್ ಲೇಔಟ್, ಬಿ.ಡಿ.ಎಸ್. ಲೇಔಟ್, ಸೆಂಟ್ರಲ್‌ಎಕ್ಸೈಸ್, ಬೈರ ಅಪಾರ್ಟ್‌ಮೆಂಟ್, ಕೆ.ಇ.ಬಿ. ಟಿ.ಸಿ., ಶೋಭಾ ಅಪಾರ್ಟ್‌ಮೆಂಟ್ಸ್, ಥಣಿಸಂದ್ರ, ಹೆಣ್ಣೂರು ಬಂಡೆ, ಸಾಮುದ್ರಿಕಾ ಎನ್‌ಕ್ಲೇವ್, ಗ್ರೇಸ್ ಗಾರ್ಡನ್, ಕ್ರಿಸ್ತ ಜಯಂತಿ ಕಾಲೇಜ್, ಕೆ.ನಾರಾಯಣಪುರ, ಬಿಳಿಶಿವಾಲೆ, ಆಶಾ ಟೌನ್‌ಶಿಪ್, ಐಶ್ವರ್ಯ ಲೇಔಟ್, ಮಾರುತಿ ಟೌನ್‌ಶಿಪ್, ನಗರಗಿರಿ ಟೌನ್‌ಶಿಪ್, ಕೆ.ನಾರಾಯಣಪುರ ಕ್ರಾಸ್, ಬಿ.ಡಿ.ಎಸ್. ಗಾರ್ಡನ್, ಕೊತ್ತನೂರು, ಪಟೇಲ್ ರಾಮಯ್ಯ ಲೇಔಟ್, ಅಂಜನಪ್ಪ ಲೇಔಟ್, ಸಿ.ಎಸ್.ಐ ಗೇಟ್, ಬೈರತಿ ಕ್ರಾಸ್, ಬೈರತಿ ಹಳ್ಳಿ, ಎವರ್‌ಗ್ರೀನ್ ಲೇಔಟ್, ಕನಕ ಶ್ರೀ ಲೇಔಟ್, ಗೆದ್ದಲ ಹಳ್ಳಿ, ಬ್ಲೆಸ್ಸಿಂಗ್ ಗಾರ್ಡನ್, ಮಂತ್ರಿ ಅಪಾರ್ಟ್‌ಮೆಂಟ್, ಹಿರೇಮಠ ಲೇಔಟ್, ಟ್ರಿನಿಟಿ ಫಾರ್ಚೂನ್, ಮೈಕಲ್ ಸ್ಕೂಲ್, ಬಿ.ಎಚ್.ಕೆ. ಇಂಡಸ್ಟ್ರೀಸ್, ಜಾನಕೀರಾಮ್ ಲೇಔಟ್, ವಡ್ಡರ ಪಾಳ್ಯ, ಅನುಗ್ರಹ ಲೇಔಟ್, ಕಾವೇರಿ ಲೇಔಟ್, ಆತ್ಮ ವಿದ್ಯಾನಗರ, ಬೈರತಿ ಹಳ್ಳಿ, ಕೆ.ಆರ್.ಸಿ, ದೊಡ್ಡಗುಬ್ಬಿ ಕ್ರಾಸ್, ಕುವೆಂಪು ಲೇಔಟ್, ಸಂಗಂ ಎನ್‌ಕ್ಲೇವ್, ಬೈರತಿ ಬಂಡೆ, ನಕ್ಷತ್ರ ಲೇಔಟ್, ತಿಮ್ಮೇಗೌಡ ಲೇಔಟ್, ಬಟ್ಟರಹಳ್ಳಿ, ಮೇದಹಳ್ಳಿ ಸೇರಿದಂತೆ ಮುಂತಾದ ಕಡೆಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.



Hosa Digantha 04/01/18

## ಕಿರು ಸುದ್ದಿ

### ಪಾವಗಡದಲ್ಲಿ ಟಾಟಾ ಸೋಲಾರ್ ಘಟಕ

**ಬೆಂಗಳೂರು:** ನವೀಕರಿಸಬಹುದಾದ ಇಂಧನ ಉತ್ಪಾದನಾ ಕಂಪನಿಯಾಗಿರುವ ಟಾಟಾ ಪವರ್, ತುಮಕೂರು ಜಿಲ್ಲೆಯ ಪಾವಗಡದ ಸೋಲಾರ್ ಪಾರ್ಕ್‌ನಲ್ಲಿ ಟಿಪಿಆರ್‌ಇಎಲ್ 50 ಮೆಗಾವ್ಯಾಟ್ ಡಿಸಿಆರ್ ಸೋಲಾರ್ ಘಟಕವನ್ನು ಸ್ಥಾಪಿಸಿದೆ.

ಪಾವಗಡದಲ್ಲಿ 253 ಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ 50 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಘಟಕವು, ಪ್ರತಿ ಯೂನಿಟ್‌ಗೆ 4.84 ರೂಪಾಯಿ ದರದಲ್ಲಿ ವಿದ್ಯುತ್ ಮಾರಾಟ ಮಾಡುವ ಸಂಬಂಧ ಕಂಪನಿಯು 25 ವರ್ಷಗಳ ಖರೀದಿ ಒಪ್ಪಂದಕ್ಕೆ ಎನ್‌ಟಿಪಿಸಿಯೊಂದಿಗೆ ಸಹಿ ಹಾಕಿದೆ.

ಪಾವಗಡದಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆಯನ್ನು 2025 ರ ವೇಳೆಗೆ ಶೇ. 35 ರಿಂದ 40 ಹೆಚ್ಚಿಸುವ ಗುರಿ ಹೊಂದಲಾಗಿದೆ. ಪ್ರಸಕ್ತ ಸಾಲಿನಲ್ಲಿ ಟಾಟಾ ಪವರ್ ರಿನ್ಯೂವೇಬಲ್ ಎನರ್ಜಿ ಸಾಮರ್ಥ್ಯ 2000 ಮೆಗಾವ್ಯಾಟ್ ಗಡಿ ದಾಟಿದ್ದು, ಒಟ್ಟಾರೆ ಹಸಿರು ಇಂಧನ ಸಾಮರ್ಥ್ಯ 3000 ಮೆಗಾವ್ಯಾಟ್ ಗುರಿ [illegible]

ಗುಜರಾತ್‌ನ ಚರಂಕಾದ [illegible] ಪಾರ್ಕ್‌ನಲ್ಲಿ ಟಿಪಿಆರ್‌ಇಎಲ್ 25 ಮೆಗಾವ್ಯಾಟ್ ವಿದ್ಯುತ್‌ಉತ್ಪಾದನಾ ಘಟಕವನ್ನು ಇತ್ತೀಚೆಗೆ ಆರಂಭಿಸಲಾಗಿದೆ. ಅಂತೆಯೇ, ಮಹಾರಾಷ್ಟ್ರದ ಪಲಾಸ್ ವಾಡೆಯಲ್ಲಿ 30 ಮೆಗಾವ್ಯಾಟ್, ಕರ್ನಾಟಕದ ಪಾವಗಡ ಸೋಲಾರ್ ಪಾರ್ಕ್‌ನಲ್ಲಿ 100 ಮೆಗಾವ್ಯಾಟ್ ವಿದ್ಯುತ್‌ಉತ್ಪಾದನಾ ಘಟಕಗಳನ್ನು ಆರಂಭಿಸಲಾಗಿದೆ.

ನ್ಯಾಷನಲ್ ಸೋಲಾರ್ ಮಿಷನ್ –ಫೇಸ್ 2 ರಡಿಯಲ್ಲಿ 2016 ರ ಏಪ್ರಿಲ್ 4 ರಂದು ಈ ಯೋಜನೆ ಆರಂಭಿಸಲು ಕಂಪನಿ ಅನುಮತಿ ಪಡೆದಿತ್ತು. ಈ ಹಿನ್ನೆಲೆಯಲ್ಲಿ ಇದೀಗ ಕಂಪನಿ ಒಟ್ಟು 1664 ಮೆಗಾವ್ಯಾಟ್ ವಿದ್ಯುತ್‌ಉತ್ಪಾದನಾ ಸಾಮರ್ಥ್ಯವನ್ನು ಹೊಂದಿದಂತಾಗಿದೆ.

Hosa Digantha Page-1 04/01/18

▶ ದೇವಸ್ಥಾನ ಹಿಂಭಾಗದ ಮಹಾತಡೆಗೋಡೆ ಬಿರುಕು | ಪಕ್ಕದಲ್ಲಿರುವ ವಿದ್ಯುತ್ ಪರಿವರ್ತಕದ ಮೇಲೆ ಕುಸಿಯುವ ಅಪಾಯ

# ಅಪಾಯದಂಚಿನಲ್ಲಿ ಶ್ರೀ ಸೋಮೇಶ್ವರ ಸ್ವಾಮಿ ದೇವಾಲಯ

▶ದಿಗಂತ ವರದಿ:ಬೆಂಗಳೂರು, ಜ.3

ದಿಗಂತ ಚಿತ್ರ



ಸುಮಾರು 1200 ವರ್ಷಗಳ ಇತಿಹಾಸವಿರುವ ನಗರದ ಶ್ರೀ ಸೋಮೇಶ್ವರ ಸ್ವಾಮಿ ದೇವಸ್ಥಾನ ಹಿಂಭಾಗದ ಮಹಾತಡೆಗೋಡೆ ಶಿಥಿಲಾವಸ್ಥೆಯಿಂದ ಬಳುತ್ತಿದೆ. ಅಲ್ಲದೆ ತಡೆಗೋಡೆಯಲ್ಲಿ ಬಿರುಕು ಮೂಡಿದ್ದು, ಪಕ್ಕದಲ್ಲಿರುವ ವಿದ್ಯುತ್ ಪರಿವರ್ತಕ (ಟ್ರಾನ್ಸ್‌ಫಾರ್ಮರ್) ಮೇಲೆ ಕುಸಿಯುವ ಅಪಾಯ ಹೆಚ್ಚಾಗಿದೆ. ಇದು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ.

ಮುಜರಾಯಿ ಇಲಾಖೆ ನಗರ ವ್ಯಾಪ್ತಿಯಲ್ಲಿ ಎ ವರ್ಗದಲ್ಲಿ ಬರುವ ಹಾಗೂ ಹೆಚ್ಚು ಹಣ ಸಂಗ್ರಹವಾಗುವ ದೇವಸ್ಥಾನಗಳ ಪೈಕಿ ಸೋಮೇಶ್ವರ ದೇವಸ್ಥಾನವೂ ಒಂದು. 1200 ವರ್ಷಗಳ ಇತಿಹಾಸವಿರುವ ದೇವಸ್ಥಾನವನ್ನು ಉಳಿಸಿ, ಮುಂದಿನ ಪೀಳಿಗೆಯವರಿಗೆ ದೇವಾಲಯ ವೈಭವ ಸಾರುವುದು ಪ್ರತಿಯೊಬ್ಬರ ಕರ್ತವ್ಯ. ಇದಕ್ಕೆ ತಕ್ಕುದಾದಂತೆ ಪುರಾತನ ದೇವಾಲಯಕ್ಕೆ ಮೂಲಸೌಕರ್ಯ ಒದಗಿಸದೆ ದೇವಸ್ಥಾನ ಆಡಳಿತ ಮಂಡಳಿ ದಿವ್ಯ ನಿರ್ಲಕ್ಷ್ಯ ತೋರಿದೆ ಎಂದು ಸ್ಥಳೀಯರಿಂದ ದೂರುಗಳು ಬಂದಿವೆ. ದೇವಸ್ಥಾನದ ತಡೆಗೋಡೆ ಬಿರುಕು ಬಿಟ್ಟು ಹಲವು ದಿನಗಳು ಕಳೆದರೂ ಇದನ್ನು ಸರಿಪಡಿಸುವ ಗೋಜಿಗೆ ಯಾರು ಮುಂದಾಗಿಲ್ಲ.

ಅಲ್ಲದೆ, ಗೋಡೆ ಹಿಂಭಾಗ ರಸ್ತೆಯಾದ ಸುಂದರ್ ಮೊದಲಿಯಾರ್ ರಸ್ತೆ ಕಿರಿದಾಗಿದೆ. ಸಾಲದೆಂಬಂತೆ ಗೋಡೆಗೆ ತಾಗಿಕೊಂಡಂತೆ ಟ್ರಾನ್ಸ್‌ಫಾರ್ಮರ್ ಅಳವಡಿಸಿದ್ದು, ಮುಂಜಾಗ್ರತಾ ಕ್ರಮವಾಗಿ ತಂತಿ ಬೇಲಿ ಸೇರಿದಂತೆ ಯಾವ ಸುರಕ್ಷತೆ ಕ್ರಮವನ್ನು ಅನುಸರಿಸಿಲ್ಲ. ಈ ಬಗ್ಗೆ ಬೆಸ್ಕಾಂಗೆ ಸ್ಥಳೀಯರು ದೂರು ನೀಡಿದರೂ ಪ್ರಯೋಜನವಾಗಿಲ್ಲ. ಒಂದು ವೇಳೆ ಬಿರುಕು ಬಿಟ್ಟಿರುವ ಬಂಡೆ ಆಕಾರದಂತಿರುವ ಗೋಡೆ ಕುಸಿದರೆ ನೇರವಾಗಿ ವಿದ್ಯುತ್ ಪರಿವರ್ತಕ ಮೇಲೆ ಬೀಳುವ ಅಪಾಯವಿದ್ದರೂ ಸಂಬಂಧಿಸಿದವರು ಮೌನ ವಹಿಸಿದ್ದಾರೆ ಎಂಬ ಆರೋಪ ಸ್ಥಳೀಯರದ್ದು.



**“ಗೋಡೆಯಲ್ಲಿ ಬಿರುಕು ಕಾಣಿಸಿಕೊಂಡಿರುವುದು ಗಮನಕ್ಕೆ ಬಂದಿದೆ. ಇದಕ್ಕಾಗಿ ದೇವಸ್ಥಾನ ಅಭಿವೃದ್ಧಿ ಮಂಡಳಿಯು ಈಗಾಗಲೇ 20 ಲಕ್ಷ ರೂಪಾಯಿ ಠೇವಣಿ ಇಟ್ಟಿದೆ. ಇನ್ನೊಂದು ವಾರದಲ್ಲಿ ಟೆಂಡರ್ ಕರೆದು ಕಾಮಗಾರಿ ಆರಂಭಿಸಲಾಗುವುದು. ಅಲ್ಲದೆ, ಟ್ರಾನ್ಸ್‌ಫಾರ್ಮರ್ ಸ್ಥಳಾಂತರ ಮಾಡಲು ಈಗಾಗಲೇ ಬೆಸ್ಕಾಂಗೆ ಪತ್ರ ಬರೆಯಲಾಗಿದೆ.**

■ **ನರಸಿಂಹಮೂರ್ತಿ, ಶ್ರೀ ಸೋಮೇಶ್ವರ ದೇವಾಲಯ ಆಡಳಿತ ಮಂಡಳಿ ಅಧ್ಯಕ್ಷ.**

**[illegible]**

[illegible] ಎಂದು ಸ್ಥಳೀಯರಾದ ಬಿ.ಆರ್.ಚಂದ್ರು ಆಗ್ರಹಿಸಿದ್ದಾರೆ.



ದಿ ಟೈಮ್ಸ್ ಆಫ್ ಇಂಡಿಯಾ
ಬೆಂಗಳೂರು ಮುನ್ನೋಟ
KPMG
ಬೆಳಗೋಣ ಬೆಂಗಳೂರು
ಬೆಂಗಳೂರಿಗರೇ, ಬದಲಾವಣೆಗಾಗಿ ಮುಂದೆ ಬನ್ನಿ
ದಿನಪೂರ್ತಿ ತಡೆರಹಿತ ವಿದ್ಯುಚ್ಛಕ್ತಿ ಪೂರೈಕೆ, ಸ್ವಚ್ಛ ಇಂಧನ ಮೂಲಗಳ ಸಂಶೋಧನೆ, ಸ್ಮಾರ್ಟ್ ಗ್ರಿಡ್ ಯೋಜನೆಯ ಉತ್ತಮಪಡಿಸುವಿಕೆ- ಮೊದಲಾದ ಕ್ರಮಗಳ ಮೂಲಕ ಬೆಂಗಳೂರನ್ನು ವಾಸಯೋಗ್ಯ ನಗರವನ್ನಾಗಿ ರೂಪಿಸಬೇಕಿದೆ. ಈ ವಿಷಯಗಳ ಬಗ್ಗೆ ನಿಮ್ಮ ಆಲೋಚನೆ, ಸಲಹೆ ಮತ್ತು ಕಾಳಜಿಗಳನ್ನು ಹಂಚಿಕೊಳ್ಳಿ.
BMRDA
ಹೆಚ್ಚಿನ ಮಾಹಿತಿಗಾಗಿ
SIDDARAMAIAH
ನವ ಕರ್ನಾಟಕ
ನಿರ್ಮಾಣಕ್ಕೆ
ಸದಾ ಸಿದ್ಧ ಸರ್ಕಾರ

Samyuktha Karnataka pg 07 4/01/18

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(CIN : U40109KA1999SGC025521)

ಸಂಖ್ಯೆ : ಕವಿಪ್ರನಿನಿ/ಬಿ16/69480/2017-18 ದಿನಾಂಕ : 03.01.2018

## ನೇಮಕಾತಿ ಅಧಿಸೂಚನೆ

## ಕಂಪನಿ ಕಾರ್ಯದರ್ಶಿ ನೇಮಕಾತಿ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು (ಕವಿಪ್ರನಿನಿ) ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದ್ದು, ರಾಜ್ಯದಲ್ಲಿ ವಿದ್ಯುತ್ ಪ್ರಸರಣ ವ್ಯವಸ್ಥೆಯ ನಿರ್ಮಾಣ ಮತ್ತು ನಿರ್ವಹಣೆ ಕಾರ್ಯಗಳಲ್ಲಿ ತೊಡಗಿರುತ್ತದೆ. ನಿಗಮವು ತನ್ನ ಬೆಂಗಳೂರಿನಲ್ಲಿರುವ ಕಾರ್ಪೋರೇಟ್ ಕಛೇರಿಯಲ್ಲಿನ ಕಂಪನಿ ಕಾರ್ಯದರ್ಶಿ ಹುದ್ದೆಗೆ ಸೂಕ್ತ ಅಭ್ಯರ್ಥಿಯ ಆಯ್ಕೆಗಾಗಿ ಈ ಅಧಿಸೂಚನೆಯನ್ನು ಹೊರಡಿಸಿದೆ.

ಅಭ್ಯರ್ಥಿಯು;

1. ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ(ICSI)ದ ಸದಸ್ಯರಾಗಿರಬೇಕು ಮತ್ತು ಕನಿಷ್ಠ ಹತ್ತು ವರ್ಷಗಳ ಅನುಭವ ಹೊಂದಿರಬೇಕು.
2. ಕಂಪನಿಗಳ ಕಾಯ್ದೆ, 2013ರ ಅಡಿಯಲ್ಲಿ ದಾಖಲಾದ ಎಲ್ಲಾ ಶಾಸನಬದ್ಧ ಕಾರ್ಯಗಳನ್ನು ಸಮಯೋಚಿತ ಅನುಸರಣೆ ಮತ್ತು ಇನ್ನಿತರ ಸಂಬಂಧಿಸಿದ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವವರಾಗಿರಬೇಕು.
3. ಸರ್ಕಾರದ ಪ್ರಾಧಿಕಾರಗಳ ಜೊತೆ ನಿಯತಕಾಲಿಕವಾಗಿ ಆಂಗ್ಲಬಾಷೆ ಮತ್ತು ಕನ್ನಡ ಬಾಷೆಯಲ್ಲಿ ಪರಿಣಾಮಕಾರಿಯಾಗಿ ವ್ಯವಹರಿಸುವ ಸಾಮರ್ಥ್ಯ ಹೊಂದಿರಬೇಕು.

ಆಸಕ್ತಿಯುಳ್ಳ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಕವಿಪ್ರನಿನಿ ವೆಬ್‌ಸೈಟ್: **www.kptcl.com** ಗೆ ಭೇಟಿಮಾಡಿ ಮತ್ತು ದಿನಾಂಕ : **19.01.2018** ರಂದು ಅಥವಾ ಮುಂಚಿತವಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಸಹಿ/-
ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು-560 009.

# KARNATAKA POWER TRANSMISSION CORPORATION LIMITED

CIN: U40109KA1999SGC025521

No: KPTCL/B16/69480/2017-18 DATED: 03.01.2018

## RECRUITMENT NOTIFICATION

## REQUIREMENT OF COMPANY SECRETARY

The Karnataka Power Transmission Corporation Limited (KPTCL) is wholly owned by the Government of Karnataka carrying out construction and maintenance of electrical transmission system in the State. The Corporation is looking for a suitable candidate for the post of Company Secretary at its Corporate Office in Bengaluru. The candidate shall be;

1. A member of the Institute of Company Secretaries of India (ICSI) and have a minimum of TEN YEARS experience.
2. Capable of efficient and timely compliance of all the statutory functions of the post under the Companies Act, 2013 and such other duties.
3. Able to correspond in English and Kannada effectively with ability to interact with Government authorities regularly.

Interested candidates may look up website **www.kptcl.com** for more details and apply **on or before 19.01.2018.**

Sd/- **Director (Admn. & HR)**
Corporate Office, KPTCL, Kaveri Bhavan, Bengaluru - 560 009.